ಶ್ರೀ ಸಿ. ಬೈರೇಗೌಡ :— ಇವತ್ತು ಕೃಷಿ ಉತ್ಪನ್ನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಏನು ನೂರು ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದೆ ಅದರಡಿಯಲ್ಲಿಯೇ ಈ ತೆಂಗಿನ ಕಾಯಿಯನ್ನು ಕೊಂಡುಕೊಂಡು ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕು. ರೈತ ಹಾಳಾಗಿದ್ದಾನೆ, ನೀವು ಈ ರೀತಿಯಾಗಿ ಆಲೋಚನೆ ಮಾಡುವುದಾದರೆ ನಾವು ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ ನಾವು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತೇವೆ.

(ಈ ಹಂತದಲ್ಲಿ ಎಲ್ಲಾ ಜನತಾದಳ (ಯು) ಸದಸ್ಯರು ಪ್ರತಿಭಟನೆ ಮಾಡಿ ಸದನದಿಂದ ಹೊರಗೆ ಹೋದರು.)

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ನಾವು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ, ಇದರ ಬಗ್ಗೆ ಹೇಳುತ್ತಿದ್ದೇವೆ, ಎಲ್ಲರೂ ಒಟ್ಟಿಗೆ ಹೋಗೋಣವೆಂದು ಮಾನ್ಯ ಸಚಿವರು ಇಲ್ಲಿ ಪ್ರಸ್ತಾಪ ಮಾಡಿದರು. ಇದು ಸದನದಲ್ಲಿ ಪ್ರಸ್ತಾಪವಾಗುವಂತಹ ಸಂದರ್ಭದಲ್ಲಿ ಆಗಬಾರದು, ಎಷ್ಟು ಅಮದುವನ್ನು ಎಲ್ಲಿ ಮಾಡಿದ್ದಾರೆ? ಅದರ ರೆಕಾರ್ಡ್ ಏನು ನಿಮ್ಮ ಕಡೆ ಇದೆಯೋ ಅದನ್ನು ಸದನದ ಮುಂದೆ ಇಡಿ. ಹಾಗಾದರೆ ಕೇಂದ್ರ ಸರ್ಕಾರದಿಂದ ಏನು ಸಹಾಯವನ್ನು ಪಡೆದುಕೊಳ್ಳಬೇಕೋ, ಅದರ ಬಗ್ಗೆ ಎಲ್ಲರೂ ಹೋಗೋಣ. ಆದರೆ ಇಲ್ಲಿ ಒಂದು ಆತಂಕಕಾರಿ ಕ್ಷಣಗಳು, ನೀವು ತಕ್ಷಣ ತೆಂಗು ಬೆಳೆಗಾರರಿಗೆ ಮಾರ್ಕೆಟ್ ಇಂಟರ್‌ವಿನ್ ಮಾಡಲಾರದೆ ತಕ್ಷಣ ಅದನ್ನು ಪರ್ಚೇಸ್ ಮಾಡುವುದು ಆಗದೆ ಇದ್ದಂತಹ ಸಂದರ್ಭದಲ್ಲಿ ಆ ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗ ಬರುತ್ತದೆ. ಆ ಪ್ರಸಂಗವು ಒದಗಿಬರುವ ಮಟ್ಟವನ್ನು ತಾವು ಯೋಚನೆಯನ್ನು ಮಾಡುತ್ತೀರೋ, ಇದರ ಬಗ್ಗೆ ರಾಜ್ಯ ಸರ್ಕಾರ ತಕ್ಷಣ ಏನು ಹೇಳುತ್ತೀರಿ? ಮೊನ್ನೆ ತಾವು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಒಂದು ಡಿಸಿಯನ್ನು ತೆಗೆದುಕೊಂಡಿದ್ರಿ ಎಂದು ಹೇಳಿದ್ದೀರಿ, ಈ ರೀತಿಯಾಗಿ ಬೆಲೆ ಕುಸಿತವಾಗಿರುವಂತಹ ಸಂದರ್ಭದಲ್ಲಿ ಮಾರ್ಕೆಟ್ ಇಂಟರ್‌ವೆನ್ಷನ್‌ನ ಸಲುವಾಗಿ ಆವರ್ತನಿಧಿಗೆ 100 ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡುತ್ತೇವೆಂದು ಹೇಳಿದ್ದೀರಿ;ಇಷ್ಟು ಹಣವನ್ನು ಕೊಟ್ಟರು ಸಾಕಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಸಹ ತಮ್ಮ ಜೊತೆಗೆ ಕೇಂದ್ರ ಸರ್ಕಾರಕ್ಕೆ ಬರುತ್ತೇವೆ, ಎಲ್ಲರೂ ಒಟ್ಟಿಗೆ ಕೂಡಿಕೊಂಡು ಹೋಗೋಣ. ಆದರೆ ತಕ್ಷಣ ಮಾರ್ಕೆಟ್ ಇಂಟರ್‌ವೆನ್ಷನ್ ಮಾಡಿದರೆ ರೈತನು ಬದುಕುವುದಕ್ಕೆ ಸಾಧ್ಯವಾಗುತ್ತದೆ. ನಂತರ ಇದರ ಬಗ್ಗೆ ವಿಚಾರವನ್ನು ಮಾಡೋಣ, ತಾವು ಯಾವುದಾದರೊಂದು ಯೋಜನೆಗಳಿಗೆ ಸರ್ಕಾರ 100 ರಿಂದ 1,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಎಲ್ಲೋ ಭ್ರಷ್ಟಾಚಾರವಾಗಿ 100 ಕೋಟಿ ರೂಪಾಯಿಗಳು ಹೋಗುತ್ತದೆ. ಆದರೆ ಇದಕ್ಕಾಗಿ ಒಂದು 50 ಕೋಟಿ ರೂಪಾಯಿಗಳನ್ನು ಕೊಟ್ಟು ಮಾರ್ಕೆಟ್ ಇಂಟರ್‌ವೆನ್ಷನ್ ಮಾಡಿದರೆ ಆ ರೈತನು